## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## ಎಸ್.ಸಿ ಸಂಖ್ಯೆ– 8/2023

| | | |
|---|---|---|
| **ಸಾಕ್ಷಿದಾರನ ಹೆಸರು** | : ಶ್ರೀಧರ್ ಅದಿಕಾರಿ | **ಪಿ.ಡಬ್ಲ್ಯೂ–** 14 |
| **ತಂದೆಯ ಹೆಸರು** | : ಕೆ. ವೆಂಕಟರಮಣ ಅದಿಕಾರಿ | **ಸಿ.ಡಬ್ಲ್ಯೂ–** 28 |
| **ವಯಸ್ಸು** | : 64 ವರ್ಷ | |
| **ಉದ್ಯೋಗ** | : ನಿವೃತ್ತ ಎಂ.ವಿ ನಿರೀಕ್ಷಕರು. | |
| **ವಾಸಸ್ಥಳ** | : ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿಃ25.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**1.** ನಾನು 2020 ರಲ್ಲಿ ಮೈಸೂರು ಪ್ರಾದೇಶಿಕ ಸಾರಿಗೆ ಕಚೇರಿ ಪಶ್ಚಿಮದಲ್ಲಿ ಹಿರಿಯ ಮೋಟಾರ್ ವಾಹನ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ನನಗೆ ಮೇಟಗಳ್ಳಿ ಪೊಲೀಸ್ ಠಾಣೆಯಿಂದ ಬಂದ ಮನವಿಯ ಮೇರೆಗೆ ದಿಃ– 23.01.2020 ರಂದು ಬೆಳಿಗ್ಗೆ 9.30 ಗಂಟೆಗೆ ಮೇಟಗಳ್ಳಿ ಪೊಲೀಸ್ ಠಾಣೆಗೆ ಬೇಟಿ ನೀಡಿ ಠಾಣೆಯಲ್ಲಿದ್ದ ಆಟೋ ರಿಕ್ಷಾ ವಾಹನ ಸಂಖ್ಯೆ ಕೆಎಃ– 10 ಡಿ 7303 ನ್ನು ಪರೀಕ್ಷಿಸಿದಾಗ ವಾಹನವು ಆಟೋರಿಕ್ಷಾ ವಾಹನವಾಗಿದ್ದು ಅದರ ಚಾರ್ಸಿಸ್ ಸಂಖ್ಯೆ 24 ಎಪ್ 96 ಡಿ 00354 ಮತ್ತು ಇಂಜಿನ್ ಸಂಖ್ಯೆ 24 ಎಂ 96 ಡಿ 91257 ಆಗಿರುತ್ತದೆ. ವಾಹನಕ್ಕೆ ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತವೆ.

1) ಹೆಡ್ ಲೈಟ್ ಜಖಂಗೊಂಡಿದ್ದು, ಮುಂಭಾಗದ ವಿಂಡ್ ಸ್ಕ್ರೀನ್ ಗಾಜು ಒಡೆದು ಹೋಗಿತ್ತು.

2) ಎಡಬದಿಯ ಕನ್ನಡಿ ಒಡೆದು ಹೋಗಿತ್ತು.

3) ಎಡಬದಿಯ ಬಾಡಿ ಜಖಂಗೊಂಡಿತ್ತು.

4) ವಾಹನದ ಟಾಪ್ ಜಖಂಗೊಂಡಿತ್ತು. ವಾಹನವನ್ನು ಪರೀಕ್ಷಿಸಿದಾಗ ವಾಹನವು ರಸ್ತೆಯಲ್ಲಿ ಓಡಾಡಲು ಸುಸ್ಥಿತಿಯಲ್ಲಿ ಇರುವುದಿಲ್ಲ.

**3.** ನಂತರ ಪರಿಶೀಲನೆ ಮುಗಿದ ಬಳಿಕ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–23 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–23(ಎ) ಎಂದು ಗುರುತಿಸಲಾಯಿತು. ಸದರಿ ವಾಹನವು ಮೇಲೆ ಹೇಳಿದ ಜಖಂಗಳಿಂದಾಗಿ ವಾಹನ ರಸ್ತೆಯಲ್ಲಿ ಓಡಾಡುವ ಸ್ಥಿತಿಯಲ್ಲಿರಲಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

**4.** ವಾಹನವು ಪಲ್ಟಿಯಾಗಿ ಬಿದ್ದ ಕಾರಣ ಆ ರೀತಿ ಜಖಂಗಳು ಆಗಿರುತ್ತವೆ ಎಂದರೆ ಸರಿ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**